ಕಟ್ಟಡಗಳ ನಿರ್ಮಾಣಕ್ಕೆ ಮೊದಲನೇ ಆದ್ಯತೆಯನ್ನು ಕೊಟ್ಟು ಅವುಗಳ ದುರಸ್ತಿ ಅಥವಾ ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಯಾವುದಾದರೊಂದು ಯೋಜನೆಯ ರೀತಿಯಲ್ಲಿ ಪ್ಯಾಕೇಜ್ ತರಬೇಕೆಂದು ಮತ್ತೊಮ್ಮೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ – ಈ ಯೋಜನೆ ಪ್ರಾರಂಭವಾದಾಗಿನಿಂದ ಪ್ರತಿ ವರ್ಷ ಸ್ವಲ್ಪ ಕಟ್ಟಡಗಳನ್ನು ಕಟ್ಟಿಕೊಂಡು ಬಂದಿದ್ದರೆ ಈ ಸಮಸ್ಯೆ ಮುಗಿದು ಹೋಗುತ್ತಿತ್ತು ಮಧ್ಯದಲ್ಲಿ ಈ ಕೆಲಸಗಳನ್ನು ಮಾಡದೇ ಇರುವುದರಿಂದ ಇದರ ಹೊರೆ ನಮ್ಮ ಮೇಲೆ ಹೆಚ್ಚು ಬಿದ್ದಿದೆ ಈಗ ನಮ್ಮ ಮೇಲಿರತಕ್ಕಂಥ ಹೊರೆಗೆ ತಕ್ಕಂತೆ ಅನುದಾನವನ್ನು ಒದಗಿಸಿಕೊಂಡು ಆ ಕೆಲಸವನ್ನು ಮಾಡುತ್ತೇವೆ

ಪಂಚಾಯಿತಿವಾರು ಪಡಿತರ ರದ್ದುಗೊಳಿಸುವುದು

146 (643) **ಶ್ರೀ ಗೋಪಾಲ ಪೂಜಾರಿ ಕೆ** (ಬೈಂದೂರು) –ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಉಡುಪಿ ಜಿಲ್ಲೆ ಬೈಂದೂರು ಕ್ಷೇತ್ರದಲ್ಲಿ ಪಂಚಾಯಿತಿವಾರು ಪಡಿತರ ಚೀಟಿ ಯಾವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ , (ವಿವರಗಳನ್ನು ನೀಡುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) –

(ಅ) ಉಡುಪಿ ಜಿಲ್ಲೆ ಬೈಂದೂರು ಕ್ಷೇತ್ರ ವ್ಯಾಪ್ತಿಯ 30 ಗ್ರಾಮ ಪಂಚಾಯತ್‌ಗಳ ಒಟ್ಟು 1826 ಬಿಪಿಎಲ್ ಪಡಿತರ ಕೂಪನ್‌ಗಳನ್ನು ರದ್ದುಪಡಿಸಲಾಗಿದೆ

ಸರಕಾರ ನಿಗದಿಪಡಿಸಿದ ಮಾನದಂಡಗಳನ್ವಯ ಪರಿಶೀಲನೆ ನಡೆಸಿ ಸರಕಾರ ನಿಗದಿಪಡಿಸಿದ ಆದಾಯಕ್ಕಿಂತ ಜಾಸ್ತಿ ಆದಾಯ ಇರುವ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ

ಶ್ರೀ ಗೋಪಾಲ ಪೂಜಾರಿ ಕೆ – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ನನ್ನ ಕ್ಷೇತ್ರದಲ್ಲಿ 1826 ಪಡಿತರ ಕೂಪನ್‌ಗಳನ್ನು ರದ್ದು ಮಾಡಿದ್ದಾರೆ ಈ ಸದನದಲ್ಲಿ ಪಡಿತರ ಚೀಟಿಯು ವ್ಯವಹಾರದ ಬಗ್ಗೆ ಹಿಂದೆ ಬಹಳಷ್ಟು ಚರ್ಚೆಯಾಗಿತ್ತು ಆ ಸಂದರ್ಭದಲ್ಲೆ ಪುನರ್ ಸಮೀಕ್ಷೆಗೆ ಆದೇಶವಾಗಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಮತ್ತು ವಿಲೇಜ್ ಅಕೌಂಟೆಂಟ್ ಹಾಗೂ ಗ್ರಾಮ ಸದಸ್ಯರುಗಳು ಒಟ್ಟಿಗೆ ಹೋಗಿ ಸಮೀಕ್ಷೆ ಮಾಡಿದ್ದರು ಸಮಿಕ್ಷೆ ಮಾಡಿ ಬಿಪಿಎಲ್ ಲಿಸ್ಟ್ ಆದಮೇಲೆ ಪಡಿತರ ಕೂಪನ್ ಅನ್ನು ವಿತರಣೆ ಮಾಡುವಂಥ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ್

ಕಟ್ಟಡದ ಒಳಗೆ ಕುಳಿತು ರದ್ದು ಮಾಡತಕ್ಕಂಥ ವ್ಯವಸ್ಥೆಯಾಗಿದೆ ನನ್ನ ಕ್ಷೇತ್ರದಲ್ಲಿ ಸುಮಾರು 2000 ಕಾರ್ಡ್‌ಗಳನ್ನು ರದ್ದು ಮಾಡಿದ್ದಾರೆ ಅತೀ ಕಡುಬಡವರು ಮತ್ತು ಮೀನುಗಾರರು ಇವತ್ತಿನ ದಿವಸ ಪಡಿತರ ಚೀಟಿಯನ್ನು ನಂಬಿಕೊಂಡು ಜೀವನ ಸಾಗಿಸುವಂಥ ಸ್ಥಿತಿ ಇದೆ ಗ್ರಾಮ ಪಂಚಾಯತಿಯ ಗಮನಕ್ಕೆ ತರದೆ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಾಲ್ಲೂಕು ಪಂಚಾಯತ್ ಕಟ್ಟಡದಲ್ಲಿ ಕುಳಿತು ರದ್ದು ಮಾಡತಕ್ಕಂಥ ಪರಿಸ್ಥಿತಿ ನನ್ನ ತಾಲ್ಲೂಕಿನಲ್ಲಿ ಉದ್ಭವವಾಗಿದೆ ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ? ಈ ರೀತಿ ಮಾಡಿರತಕ್ಕಂಥದು ತಪ್ಪು, ಕಾನೂನಿನ ಅಡಿಯಲ್ಲಿ ಇದನ್ನು ಮಾಡಲಾಗಿದೆಯೇ ?

ಶ್ರೀ ಗೋವಿಂದ ಎಂ ಕಾರಜೋಳ – ಸನ್ಮಾನ್ಯ ಸಭಾಧ್ಯಕ್ಷರೆ, ತಾಲ್ಲೂಕು ಪಂಚಾಯತ್ ಕಟ್ಟಡಗಳಲ್ಲಿ ಕುಳಿತು ರದ್ದು ಮಾಡಿದ್ದರೆ ಅದು ತಪ್ಪಾಗುತ್ತದೆ ಮುಸೆ ಮನೆಗೆ ಹೋಗಿ ಸಮೀಕ್ಷೆ ಮಾಡಿ ಮಾಡಬೇಕೆಂದು ಸರ್ಕಾರದ ಆದೇಶ ಇದೆ ಈಗಾಗಲೇ ಯಾರ ಆದಾಯ ಹೆಚ್ಚಿದೆ, ಅಂತಹವರ ಪಡಿತರ ಚೀಟಿಯನ್ನು ಮಾತ್ರ ರದ್ದು ಮಾಡಿದ್ದಾರೆ ಯಾರಿಗಾದರೂ ಅನ್ಯಾಯವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರೆ, ವಿಶೇಷವಾಗಿ ಮತ್ತೊಂದು ಸಲ ಸರ್ವೆ ಮಾಡಿಸಿ ಕೊಡುವಂಥ ವ್ಯವಸ್ಥೆ ಮಾಡುತ್ತೇನೆ

ಶ್ರೀ ಕೆ ಗೋಪಾಲ ಪೂಜಾರಿ – 75% coupon ಕೊಡತಕ್ಕಂಥ ವ್ಯವಸ್ಥೆ ಮಾಡಲಾಗುವುದೆಂದು ಮಾನ್ಯ ಸಚಿವರು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ ನಮ್ಮ ಕ್ಷೇತ್ರ ಅತಿ ಕಡುಬಡವರು ಇರುವಂಥ ಪ್ರದೇಶದಲ್ಲಿ ಇದ್ದು, ಯಾರ ಗಮನಕ್ಕೂ ಬಾರದೆ ಸಾರಾಸಗಟಾಗಿ 2000 ಕಾರ್ಡ್‌ಗಳನ್ನು ತೆಗೆದುಹಾಕಿದ್ದಾರೆ ಆ ಜನರಿಗೆ ಉತ್ತರ ಯಾರು ಕೊಡಬೇಕು

ಅಧ್ಯಕ್ಷರು – ಪೂಜಾರಿಯವರೆ, ನಿಮ್ಮ ಕ್ಷೇತ್ರದಲ್ಲಿ ಮಾತ್ರವಲ್ಲ ಎಲ್ಲಾ ಕ್ಷೇತ್ರದಲ್ಲೂ ಅದೇ ರೀತಿ ಆಗಿದೆ ಸರಿಯಾದ ರೀತಿಯಲ್ಲಿ ವಿತರಣೆ ಆಗಿಲ್ಲ

ಶ್ರೀ ಗೋವಿಂದ ಎಂ ಕಾರಜೋಳ – ಮಾನ್ಯ ಸದಸ್ಯರು ದಯವಿಟ್ಟು ಗಮನಿಸಬೇಕು 75% ಕಾರ್ಡ್ ಕೊಡುತ್ತೇವೆಂದು ನಾವು ಎಲ್ಲಿಯೂ ಹೇಳಲಿಲ್ಲ ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು 75% ಈ ರಾಜ್ಯದಲ್ಲಿ BPL ಗೆ ಸದಸ್ಯರಿದ್ದಾರೆಯೇ, families ಇದ್ದಾರೆಯೇ ? ಅದು ಸಾಧ್ಯವಿಲ್ಲ BPL card ಪಡೆಯಲಿಕ್ಕೆ ನಿಜವಾಗಿಯೂ ಯಾರು ಅರ್ಹರಿದ್ದಾರೆ, ಅವರಿಗೆ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ

ಶ್ರೀ ಕೆ ಗೋಪಾಲ ಪೂಜಾರಿ – ಹಿಂದೆ BPL card ಕೊಟ್ಟಿದ್ದರು ಹಿಂದೆ BPL ಸಮೀಕ್ಷೆಯಲ್ಲಿ, BPL list ನಲ್ಲಿ ಸೇರಿದೆ ಸಾರಾ ಸಗಟಾಗಿ ಯಾವುದೇ ಸಮೀಕ್ಷೆಗೆ ಹೋಗದೆ, ಅದು ಗ್ರಾಮ ಪಂಚಾಯತ್ ಗಮನಕ್ಕೆ ಹೋಗದೇ ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿ ಅದನ್ನು ತೆಗೆದುಹಾಕಿದ್ದರಿಂದ ಪುನರ್ ಸಮೀಕ್ಷೆ ಮಾಡಬೇಕು

ಅಧ್ಯಕ್ಷರು – ಹಿಂದೆ ಎಲ್ಲರೂ ಇದರ ಬಗ್ಗೆ ಪ್ರಶ್ನೆಗಳನ್ನು ಹಾಕಿ ಸಾಕಷ್ಟು ಚರ್ಚೆಯಾಗಿದೆ ಮತ್ತೆ ಮತ್ತೆ ಅದೇ ಏಕೆ ಹೇಳುತ್ತೀರಿ ?

ಶ್ರೀ ಕೆ ಗೋಪಾಲ ಪೂಜಾರಿ – ಕಾರ್ಡ್ ಕೊಡಬೇಕು ಇಲ್ಲದಿದ್ದರೆ ನಾವು ಜನರಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನ ಸೆಳೆದರೂ ಸಹ ಅದಕ್ಕೆ ಅವರು ಉತ್ತರ ಕೊಡುವುದಿಲ್ಲ

(ಗೊಂದಲ)

ಅಧ್ಯಕ್ಷರು – ಬೇರೆ ಬೇರೆ ಸದಸ್ಯರ ಸಮಸ್ಯೆ ಕೂಡ ಇದೇ ಆಗಿದೆ ಅದಕ್ಕೋಸ್ಕರ, ಮಾನ್ಯ ಮಂತ್ರಿಗಳು ಜಿಲ್ಲಾವಾರು ಶಾಸಕರ ಸಭೆಯನ್ನು ಕರೆದು ಆ ಜಿಲ್ಲೆಯಲ್ಲಿ ಏನೇನು ಪರಿಸ್ಥಿತಿ ಇದೆ ಎನ್ನುವುದನ್ನು ಅರ್ಥ ಮಾಡಿಕೊಂಡು ಬಡವರಿಗೆ ಏನು ಕೈತಪ್ಪಿಹೋಗಿದೆ ಅದನ್ನು ಒಂದು ನಿಗದಿತ ಸಮಯದಲ್ಲಿ ಅಂದರೆ 2 ತಿಂಗಳೋ, 3 ತಿಂಗಳೊ ತೆಗೆದುಕೊಂಡು ತ್ವರಿತವಾಗಿ ಸರಿಪಡಿಸಿ

ಶ್ರೀ ಗೋವಿಂದ ಎಂ ಕಾರಜೋಳ – ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮೀಕ್ಷೆ ಮಾಡಿಸಿ 12 71 ಲಕ್ಷ ಕಾರ್ಡ್‌ಗಳನ್ನು ಕೊಡಲಿಕ್ಕೆ ಸೂಚನೆಯನ್ನು ಕೊಟ್ಟಿದೆ ಈ ಆದೇಶ ಹೋಗಿ 3 ದಿವಸವಾಯಿತು

ಶ್ರೀ ಕೆ ಗೋಪಾಲ ಪೂಜಾರಿ – ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು ಆಯಿತು ಮಾಡುತ್ತೇನೆಂದು ಹೇಳಿದ್ದಾರಲ್ಲಾ ?

ಶ್ರೀ ಕೆ ಗೋಪಾಲ ಪೂಜಾರಿ – ಇಲ್ಲ ನಾವು ಅವರ ಕಛೇರಿಗೆ ಹೋಗಿದ್ದೆವು cancel ಮಾಡಿರುವುದನ್ನು ಸಮೀಕ್ಷೆ ಮಾಡುವುದಕ್ಕೆ ಹೇಳಿ

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) – ನಾನು ಕೇಳಿರುವ ಪ್ರಶ್ನೆ ಇದ್ದು ಅದರಲ್ಲಿ ಕೂಡ ಇದೇ ವಿಷಯವಿದೆ

ಶ್ರೀ ಕೆ ಗೋಪಾಲ ಪೂಜಾರಿ – ಮಾನ್ಯ ಅಧ್ಯಕ್ಷರೆ, ಪ್ರತಿಭಟನೆಯಾಗಿದೆ (ಗೊಂದಲ) ಜನರಿಗೆ ಉತ್ತರ ಕೊಡಲಿಕ್ಕಾಗುವುದಿಲ್ಲ cancel ಮಾಡಿರುವ ಕಾರ್ಡಿನ ಬಗ್ಗೆ ಪುನಃ ಸಮೀಕ್ಷೆ ಮಾಡುತ್ತೇನೆಂದು ಹೇಳಲಿ

ಶ್ರೀ ಗೋವಿಂದ ಎಂ ಕಾರಜೋಳ – ಮತ್ತೊಮ್ಮೆ ಸಮೀಕ್ಷೆ ಮಾಡುವುದಕ್ಕಾಗುವುದಿಲ್ಲ ಯಾರಿಗಾದರೂ ಅನ್ಯಾಯವಾಗಿ cancel ಮಾಡಿದ್ದರೆ, ಅವರಿಗೆ BPL card ಅನ್ನು ತರುವುದಕ್ಕೆ ಅರ್ಹತೆ ಇದ್ದರೆ, ನಿಜವಾಗಿ ಬಡವರಿದ್ದರೆ ಕೊಡಿಸತಕ್ಕಂಥ ಕೆಲಸ ಮಾಡುತ್ತೇವೆ

ಮಕ್ಕಳ ಕಲ್ಯಾಣ ಯೋಜನೆಗಳ ಅಭಿವೃದ್ಧಿ

147 (466) **ಶ್ರೀ ನೆ ಲ ನರೇಂದ್ರ ಬಾಬು** (ರಾಜಾಜಿನಗರ) –ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –